# ಭಾರತೀಯ ಮಹಿಳೆಯರ ಆಶಾಕಿರಣ – ಡಾ. ಬಿ. ಆರ್. ಅಂಬೇಡ್ಕರ್

**ಎಂ. ಎನ್. ಚಲವಾದಿ***

**DOI: https://doi.org/10.5281/zenodo.19637960**

**ABSTRACT**

ಪ್ರಾಚೀನ ಕಾಲದಿಂದಲೂ ಪುರುಷಪ್ರಧಾನ ಸಮಾಜದಲ್ಲಿ ಶೋಷಣೆ, ತಾರತಮ್ಯ ಮತ್ತು ಅಜ್ಞಾನದ ಅಂಧಕಾರಕ್ಕೆ ದೂಡಲ್ಪಟ್ಟಿದ್ದ ಭಾರತೀಯ ಮಹಿಳೆಯರ ವಿಮೋಚನೆಗಾಗಿ ಡಾ. ಬಿ. ಆರ್. ಅಂಬೇಡ್ಕರ್ ಅವರು ನಡೆಸಿದ ಅವಿರತ ಹೋರಾಟ ಮತ್ತು ಅವರ ಕಾನೂನಾತ್ಮಕ ಕೊಡುಗೆಗಳ ಸಮಗ್ರ ಅವಲೋಕನ ಇಲ್ಲಿದೆ. ಶಿಕ್ಷಣದಿಂದ ವಂಚಿತರಾಗಿ ಎರಡನೇ ದರ್ಜೆಯ ಪ್ರಜೆಗಳಾಗಿದ್ದ ಮಹಿಳೆಯರಿಗೆ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ತಳಹದಿಯ ಮೇಲೆ ಹೊಸ ಬದುಕನ್ನು ಕಟ್ಟಿಕೊಡುವಲ್ಲಿ ಸಂವಿಧಾನದ ಪಾತ್ರ ಅತ್ಯಮೂಲ್ಯವಾದದ್ದು. ಹಿಂದೂ ಕೋಡ್ ಬಿಲ್ ಮೂಲಕ ಮಹಿಳೆಯರಿಗೆ ಆಸ್ತಿ ಹಕ್ಕು, ವಿವಾಹ, ವಿಚ್ಛೇದನ ಹಾಗೂ ದತ್ತು ಸ್ವೀಕಾರದಂತಹ ಕ್ರಾಂತಿಕಾರಿಕ ಹಕ್ಕುಗಳನ್ನು ಒದಗಿಸಿದ ಅಂಬೇಡ್ಕರ್ ಅವರ ವೈಚಾರಿಕ ನಿಲುವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಸಂವಿಧಾನದ ವಿವಿಧ ಅನುಚ್ಛೇದಗಳ ಮೂಲಕ ಸ್ತ್ರೀ ಸಬಲೀಕರಣಕ್ಕೆ ನಾಂದಿ ಹಾಡಿದ ಅವರ ದೂರದೃಷ್ಟಿ ಹಾಗೂ ಮಹಿಳಾಪರ ಕಾಳಜಿಯನ್ನು ಎತ್ತಿತೋರಿಸುತ್ತಾ, ಅಂಬೇಡ್ಕರ್ ಅವರನ್ನು ನೈಜ ಸ್ತ್ರೀವಾದಿ ನಾಯಕರನ್ನಾಗಿ ಬಿಂಬಿಸಲಾಗಿದೆ.

**KEYWORDS:** ಡಾ. ಬಿ. ಆರ್. ಅಂಬೇಡ್ಕರ್, ಮಹಿಳಾ ಸಬಲೀಕರಣ, ಹಿಂದೂ ಕೋಡ್ ಬಿಲ್, ಭಾರತೀಯ ಸಂವಿಧಾನ, ಸ್ತ್ರೀ ಸಮಾನತೆ ಮತ್ತು ಹಕ್ಕುಗಳು.

ಮಾನವನು ನೈಜ ಮಾನವನೆನಿಸಬೇಕಾದರೆ, ಅವನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸಂಪೂರ್ಣ ವಿಕಸನ ಹೊಂದಬೇಕಾದರೆ ವಿದ್ಯಾಭ್ಯಾಸ ಅತ್ಯವಶ್ಯಕವಾಗಿದೆ. ನೈಜ ಶಿಕ್ಷಣವು ಜ್ಞಾನವನ್ನು ನೀಡುತ್ತದೆ ಮಾತ್ರವಲ್ಲ, ಮಾನವನ ಒಳಗಿನ ಮೂಲಪ್ರವೃತ್ತಿಗಳಿಗೆ ತಡೆಹಾಕಿ ಅವನಲ್ಲಿ ವಿವೇಕಕ್ಕೆ ಜನ್ಮ ನೀಡುತ್ತದೆ. ಅವನ ವಿವೇಚನಾ ಶಕ್ತಿ, ವಿಚಾರಣಾ ಶಕ್ತಿಗಳನ್ನು ಪ್ರಚೋದಿಸಿ ಅವನಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುತ್ತದೆ. ಇಂತಹ ಜ್ಞಾನದಿಂದ ವಂಚಿತರಾದವರು ಕುರುಡು ನಂಬಿಕೆಗಳಿಗೆ ಬಲಿಯಾಗಿ ತಮ್ಮ ಪ್ರಗತಿಗೆ ತಾವೇ ಅಡ್ಡಿಯಾಗುತ್ತಾರೆ; ಶಿಕ್ಷಣಾವಕಾಶವಿಲ್ಲದ ಮಹಿಳೆಯರು ಸಂಪ್ರದಾಯಗಳ ಸಂಕೋಲೆಗಳಲ್ಲಿ ಬಂಧಿತರಾಗಿ ಪುರುಷರ ಸೇವೆಗೈಯುವುದೇ ತಮ್ಮ ಜೀವನದ ಪರಮ ಗುರಿಯೆಂದು

* **ಡಾ. ಎಂ. ಎನ್. ಚಲವಾದಿ,** ಪೂರ್ಣಕಾಲಿಕ ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ಯೋಗ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಭಾವಿಸಿದ್ದರು. ಬಾಲ್ಯದಲ್ಲಿ ತಂದೆ, ನಂತರ ಪತಿ, ಮುಪ್ಪಿನ ಕಾಲದಲ್ಲಿ ಮಗ, ಇವರ ಕೆಳಗೆ ಜೀವನ ನಡೆಸುವುದೇ ಮೋಕ್ಷದಾಯಕ ಎಂದು ತಮಗೆ ನೀಡಿದ ಬೋಧನೆಯನ್ನು ಚಾಚೂತಪ್ಪದೇ ಅನುಸರಿಸುತ್ತಿದ್ದರು. ಅನ್ಯಾಯದ ವಿರುದ್ಧ ಅವರು ಪ್ರತಿಭಟಿಸದಂತೆ ಅವರನ್ನು ಅಜ್ಞಾನಿಗಳನ್ನಾಗಿಯೇ ಇಟ್ಟು, ಪುರುಷ ಪ್ರಧಾನ ಸಮಾಜ ತನ್ನ ಅಧಿಪತ್ಯವನ್ನು ನಡೆಸಿಕೊಂಡು ಹೋಗುತ್ತಾ ಹೆಮ್ಮೆಯಿಂದ ಬೀಗುತ್ತಿತ್ತು.

ಸ್ತ್ರೀಯರಿಗೆ ಶಿಕ್ಷಣವನ್ನು ಸಂಪೂರ್ಣವಾಗಿ ನಿರಾಕರಿಸಿ ಅಜ್ಞಾನದ ಅಂಧಕೂಪಕ್ಕೆ ಅವರನ್ನು ತಳ್ಳಲಾಗಿದ್ದು ಒಂದು ವಿಪರ್ಯಾಸ. ಮಾತೃ ಪ್ರಧಾನ ಸಮಾಜದಲ್ಲಿ ಪುರುಷರಿಗೆ ಸಮಾನವಾದ ಸ್ಥಾನವನ್ನು ಪಡೆದಿದ್ದ ಮಹಿಳೆ ಕಾಲಕ್ರಮದಲ್ಲಿ ಸಮಾಜ ಬದಲಾದಂತೆ ತನ್ನ ಸ್ಥಾನವನ್ನು ಕಳೆದುಕೊಂಡಿದ್ದು ಮಾತ್ರವಲ್ಲದೇ ಎರಡನೇ ದರ್ಜೆಯ ಪ್ರಜೆಯ ಸ್ಥಾನಕ್ಕೆ ಇಳಿಸಲ್ಪಟ್ಟಳು. ಪುರುಷಪ್ರಧಾನ ಸಮಾಜ ಧಾರ್ಮಿಕ ಕಟ್ಟುಪಾಡುಗಳನ್ನು ಹೇರಿ ಅವಳ ಮೇಲೆ ನಡೆಸುತ್ತಿದ್ದ ಅತ್ಯಾಚಾರ, ಶೋಷಣೆ ಮುಗಿಲು ಮುಟ್ಟಿದ್ದವು.‘‘ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ’’ (ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ) ಎಂದು ಮನುಸ್ಮೃತಿ ಅವಳ ಸ್ವಾತಂತ್ರ್ಯ ಹರಣ ಮಾಡಿದರೆ, ‘‘ಸ್ತ್ರೀಯರು ಮತ್ತು ಶೂದ್ರರು ಪಶುಸಮಾನರು, ಅವರನ್ನು ಆಳಬೇಕಾದದ್ದು ಚಾವಟಿಯ ಮೂಲಕ’’ ಎಂಬ ನುಡಿ ಅವಳಿಗೆ ನೀಡಲಾದ ಸ್ಥಾನ, ಗೌರವಕ್ಕೆ ಹಿಡಿದ ಕನ್ನಡಿಯಾಗಿದೆ. ಮಹಿಳೆಗೆ ಶಿಕ್ಷಣ ಅನಾವಶ್ಯಕ ಅಥವಾ ಅದರಿಂದ ಆಕೆಗೆ ವೈಧವ್ಯ ಪ್ರಾಪ್ತಿಯಾಗುತ್ತದೆ ಎಂಬ ವಿಚಾರ ಅಂದಿನ ಸಮಾಜದಲ್ಲಿ ಪ್ರಚಲಿತವಿತ್ತು.

ಇಂಥ ಅಂಧಕಾರಮಯ ಸಾಮಾಜಿಕ ವ್ಯವಸ್ಥೆಯಲ್ಲಿ ಕೋಲ್ಮಿಂಚಿನಂತೆ ಮೂಡಿಬಂದವರು ಡಾ. ಬಿ. ಆರ್. ಅಂಬೇಡ್ಕರ್ ರವರು. ಭಾರತೀಯ ಸಮಾಜದಲ್ಲಿ ಸಾಮಾಜಿಕ ಮೌಲ್ಯಗಳು ಏಕಮುಖಿಯಾಗಿವೆ ಮತ್ತು ಲಿಂಗ ತಾರತಮ್ಯ ಯಥಾವತ್ತಾಗಿ ಮುಂದುವರೆಯುತ್ತಿರುವುದಕ್ಕೆ ಕಾರಣವಾಗಿವೆ. ಪುರುಷ ಪ್ರಾಧಾನ್ಯತೆಯಿಂದಾಗಿ ಸ್ತ್ರೀಯರ ಮೇಲೆ ದೌರ್ಜನ್ಯ ಮತ್ತು ಸಾಮಾಜಿಕ ಶೋಷಣೆಯು ಯಾವ ಅಡ್ಡಿ ಆತಂಕವಿಲ್ಲದೇ ಇಂದಿನ ಆಧುನಿಕ ಯುಗದಲ್ಲಿಯೂ ಮುಂದುವರೆದುಕೊಂಡು ಬರುತ್ತಿದೆ. ಭಾರತೀಯ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾದವರಲ್ಲಿ ಪ್ರಮುಖವಾಗಿ ಈ ದೇಶದ ದಲಿತರು ಮತ್ತು ಮಹಿಳೆಯರಾಗಿದ್ದಾರೆ. ಆಧುನಿಕ ಯುಗದ ತತ್ವಗಳಾದ ಸಮಾನತೆ, ಸಹೋದರತ್ವ, ಸ್ವಾತಂತ್ರ್ಯ ಇವುಗಳ ಮೇಲೆ ಮತ್ತು ಆಧುನಿಕ ಪ್ರಜಾಪ್ರಭುತ್ವದ ತಳಹದಿಯ ಮೇಲೆ ನವ ಸಮಾಜದ ಬೆಳವಣಿಗೆಯನ್ನು ಮಾಡಬಯಸಿದವರು ಡಾ. ಬಿ. ಆರ್. ಅಂಬೇಡ್ಕರ್ ರವರು. ಇವರು ಸಾಮಾಜಿಕ ನ್ಯಾಯ ಮತ್ತು ತುಳಿತಕ್ಕೊಳಗಾದ ದಲಿತ ಮತ್ತು ಮಹಿಳೆಯರ ಸ್ಥಾನಮಾನಗಳ ಅಸಮಾನತೆ ಕುರಿತು ಹೋರಾಟವನ್ನು ಮಾಡಿದರು.

ಡಾ. ಬಿ. ಆರ್. ಅಂಬೇಡ್ಕರ್ ರವರು ಸಂವಿಧಾನದ ಮೂಲಕ ದೇಶದ ಸಮಗ್ರ ಮಹಿಳೆಯರ ಸಮಾನತೆಯ ಆಶಾಕಿರಣಕ್ಕಾಗಿ ಕಾನೂನು ರಚಿಸಿರುವುದರೊಂದಿಗೆ, ಪುರುಷರಿಗಿರುವ ಎಲ್ಲಾ ಸಮಾನ ಅವಕಾಶಗಳನ್ನು ಉದ್ಯೋಗ, ಶಿಕ್ಷಣ, ಸಾಮಾಜಿಕ ಹಾಗೂ ಸಾರ್ವಜನಿಕ ರಂಗದಲ್ಲಿ ಭಾರತೀಯ ಮಹಿಳಾ ಸಮಾಜಕ್ಕೆ ಸೌಲಭ್ಯ ಕಲ್ಪಿಸಿಕೊಟ್ಟು ಸಮಾನತೆಯನ್ನು ಸಾಧಿಸುವ ಮಹತ್ಕಾರ್ಯಕ್ಕೆ ಮುಂದಾದರು. ಸತಿ ಪದ್ಧತಿ ನಿಷೇಧ ಕಾನೂನು, ಗರ್ಭಪಾತದ ವಿರುದ್ಧ, ಲೈಂಗಿಕ ಕಿರುಕುಳದ ವಿರುದ್ಧ, ಹೆಣ್ಣು ಭ್ರೂಣ ಹತ್ಯೆ ವಿರುದ್ಧ, ದೇವದಾಸಿ ಪದ್ಧತಿಯ ವಿರುದ್ಧ ಧ್ವನಿ ಎತ್ತಿದವರು. ಮಹಿಳೆಯರ ಸಮಾನ ಅವಕಾಶದ ಕಾನೂನುಗಳಾದ ಅಭಿವ್ಯಕ್ತಿ ಸ್ವಾತಂತ್ರ್ಯ, ಚಲನವಲನದ ಸ್ವಾತಂತ್ರ್ಯ, ಆಯ್ಕೆಯ

ಹಕ್ಕು, ಆಸ್ತಿ ಹಕ್ಕು, ಸಮಾನ ಕೆಲಸಕ್ಕೆ ಸಮಾನ ವೇತನ, ಮತದಾನದ ಹಕ್ಕು, ಪ್ರತ್ಯೇಕ ವಿಶ್ರಾಂತಿ ಗೃಹ, ಪ್ರತ್ಯೇಕ ಶೌಚಾಲಯದ ವ್ಯವಸ್ಥೆ, ಹೆರಿಗೆ ಅವಧಿ ರಜೆ ಸೌಲಭ್ಯ ಮತ್ತು ಉದ್ಯೋಗದ ಹಕ್ಕುಗಳನ್ನು ನೀಡಿರುವ ಮಹತ್ತರವಾದ ಸಂವಿಧಾನವನ್ನು ನೀಡಿದರು.

ಜಾತೀಯತೆ ಮತ್ತು ಅಸ್ಪೃಶ್ಯತೆಗಳ ಭೀಕರತೆ ಹಾಗೂ ಅಮಾನುಷ ಸ್ಥಿತಿಗಳನ್ನು ಸ್ವತಃ ಅನುಭವಿಸಿ ಅರಿತವರಾದ ಅಂಬೇಡ್ಕರ್ ರವರು ಈ ಎಲ್ಲವುಗಳನ್ನು ನಿರ್ಮೂಲನಗೊಳಿಸಬೇಕಾದರೆ ಮಹಿಳಾ ವಿಮೋಚನೆ ಅತೀ ಅವಶ್ಯಕವೆಂದು ಮನಗಂಡಿದ್ದರು. ಈ ಹಿನ್ನೆಲೆಯಲ್ಲಿ ಅವರು ತಮ್ಮ ವೈಚಾರಿಕ ಚಿಂತನೆಯ ಜೊತೆಗೆ ಮಹಿಳಾಪರ ಚಳುವಳಿಗೆ ಉತ್ತೇಜನ ನೀಡಿ, ಅವರನ್ನು ಕೂಡ ತಮ್ಮ ವಿವಿಧ ಹೋರಾಟಗಳಾದ ಮಹಾಡ್ ಸತ್ಯಾಗ್ರಹ, ನಾಸಿಕ್ ದೇವಾಲಯ ಪ್ರವೇಶ ಚಳುವಳಿ, ಸಂವಿಧಾನಾತ್ಮಕ ರಕ್ಷಣೋಪಾಯಗಳನ್ನು ಸೇರಿಸುತ್ತಾ ಹಿಂದೂ ಕೋಡ್ ಬಿಲ್ ಮುಂತಾದವುಗಳಲ್ಲಿ ಮಹಿಳಾ ವಿಮೋಚನೆಗೆ ಪ್ರಾಯೋಗಿಕವಾಗಿ ಒತ್ತು ನೀಡಿದರು. ಹೆಣ್ಣು (ಮಹಿಳೆ) ಹಿಂದೂ ಸಮಾಜದ ಅತ್ಯಂತ ಶೋಷಿತಳು, ದಲಿತರು ಮತ್ತು ಮಹಿಳೆಯರ ಸ್ಥಿತಿಗತಿ ಒಂದೇ. ಭಾರತೀಯ ಸಮಾಜ ಒಂದು ಕೈಯಲ್ಲಿ ಅವಳನ್ನು ಪೂಜಿಸುತ್ತಾ ಮತ್ತೊಂದು ಕೈಯಲ್ಲಿ ಬೆತ್ತ ಹಿಡಿದು ಲಕ್ಷ್ಮಣ ರೇಖೆಗಳನ್ನು ದಾಟದಂತೆ ನಿರ್ಬಂಧ ವಿಧಿಸಿದೆ ಎಂಬುದನ್ನು ಅಂಬೇಡ್ಕರ್ ಸ್ವತಃ ಅರಿತಿದ್ದರು.

ಡಾ. ಬಿ. ಆರ್. ಅಂಬೇಡ್ಕರ್ ಅವರು ಭಾರತದಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳನ್ನು ಸಂಘಟಿಸಿದ್ದರು. ಅವರು 1927 ಫೆಬ್ರವರಿ 18 ರಂದು ಬಾಂಬೆ ಶಾಸನೀಯ ಮಂಡಳಿಯ ನಾಮಿನಿ ಸದಸ್ಯರಾಗಿ, ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿ ಹಾಗೂ ಭಾರತದ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಸಂಸತ್ತಿನಲ್ಲಿ ಮಹಿಳೆಯರ ಮತ್ತು ಶೋಷಿತರ ಪರ ಧ್ವನಿಯನ್ನು ಎತ್ತಿ ಅನೇಕ ಸಮಸ್ಯೆಗಳಿಗೆ ಚರ್ಚೆಯ ಮೂಲಕ ಪರಿಹಾರವನ್ನು ದೊರಕಿಸಿಕೊಟ್ಟರು. ಮಾನವ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆಯ ಹಕ್ಕುಗಳಿಗಾಗಿ ಹೋರಾಡಿದ ಅಂಬೇಡ್ಕರ್ ರವರು 1948 ರಲ್ಲಿ ತಮ್ಮ ಅತ್ಯಂತ ಮಹತ್ವಾಕಾಂಕ್ಷೆಯ, ದೂರದರ್ಶಿತ್ವದ ಮಸೂದೆಯಾದ ಹಿಂದೂ ಕೋಡ್ ಬಿಲ್ಲನ್ನು ಎಲ್ಲಾ ತುಳಿತಕ್ಕೊಳಗಾದ ವರ್ಗಗಳ ಪರವಾಗಿ, ದೀನ ದಲಿತರ ಪರವಾಗಿ, ವಿಶೇಷವಾಗಿ ಮಹಿಳೆಯರ ಪರವಾಗಿ ಸಂಸತ್ತಿನಲ್ಲಿ ಮಂಡಿಸಿದರು. ಹಿಂದೂ ಕೋಡ್ ಬಿಲ್ಲು ಜಾರಿಯಾಗುವುದನ್ನು ಸಮಾಜ ಸುಧಾರಣೆಯ ಅಂತಿಮ ಹೋರಾಟವೆಂಬಂತೆ ಭಾವಿಸಿದ ಅಂಬೇಡ್ಕರ್ ರವರು, ಈ ಸೋಲಿನಿಂದ ಅತೀವ ಮನನೊಂದು 27 ಸೆಪ್ಟೆಂಬರ್ 1951 ರಲ್ಲಿ ಕಾನೂನು ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು.

ಆದರೂ ಮಹಿಳಾಪರವಾದ ತಮ್ಮ ಚಿಂತನೆ ಕಾನೂನು ಆಗುವಂತೆ ಶ್ರಮಿಸಿ 1955ರ ಹಿಂದೂ ವಿವಾಹ ಕಾಯಿದೆ, 1956ರ ಹಿಂದೂ ಅಪ್ರಾಪ್ತತೆ ಮತ್ತು ಪೋಷಕತ್ವ ಕಾನೂನು, ಮತ್ತು 1956ರ ಹಿಂದೂ ದತ್ತಕ ಮತ್ತು ಜೀವನಾಂಶ ಕಾನೂನುಗಳನ್ನು ಪಾರ್ಲಿಮೆಂಟಿನಲ್ಲಿ ಅನುಮೋದಿಸುವಲ್ಲಿ ಅಂಬೇಡ್ಕರ್ ರವರು ಯಶಸ್ವಿಯಾದರು. ಜೊತೆಗೆ ಮಹಿಳಾಪರವಾದ ತಮ್ಮ ಚಿಂತನೆ ಕಾನೂನಾಗುವಂತೆ ಶ್ರಮಿಸಿ, ಮಹಿಳೆ ಮತ್ತು ತುಳಿತಕ್ಕೊಳಗಾದ ಜನಾಂಗದವರ ಹಿತರಕ್ಷಣೆಯನ್ನು ಸದಾಕಾಲ ಮಾಡುತ್ತೇವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಹಿಂದೂ ಉತ್ತರಾಧಿಕಾರದ ಕಾನೂನಿನ ಪ್ರಕಾರ ವಿಧವೆಯಾದ ಮಹಿಳೆ ತನ್ನ ಆಸ್ತಿಯ ವಾರಸುದಾರನನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕಾದ ದತ್ತು ಸ್ವೀಕಾರವನ್ನು ಕಾನೂನು ಸಮ್ಮತಗೊಳಿಸಿದ್ದು ಭಾರತೀಯ ಸಂದರ್ಭದಲ್ಲಿ ಗಮನಾರ್ಹ ಸಂಗತಿ. ಹಿಂದೂ ಅಪ್ರಾಪ್ತತೆ

ಮತ್ತು ಪೋಷಕತ್ವ ಕಾನೂನು ಭಾರತೀಯ ಕುಟುಂಬ ಪದ್ಧತಿಯಲ್ಲಿ ಮೊಟ್ಟಮೊದಲಿಗೆ ತಾಯಿಯಾದವಳು ಹಕ್ಕಿನಿಂದ ಮಾತನಾಡುವ, ಹಕ್ಕು ಚಲಾಯಿಸುವ ಶಕ್ತಿ ಪಡೆದುಕೊಳ್ಳಲು ಸಹಾಯ ಮಾಡಿತು. ಹಿಂದೂ ಅಪ್ರಾಪ್ತತೆ ಮತ್ತು ಪೋಷಕತ್ವ ಕಾನೂನು, ತಂದೆಯಾದವನು ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸದೇ ಇದ್ದ ಪಕ್ಷದಲ್ಲಿ ಅಥವಾ ಅವನಲ್ಲಿ ಅಪರಾಧಿ ಗುಣಗಳು ಕಂಡುಬಂದಲ್ಲಿ, ತಾಯಿಯಾದವಳು ಉಯಿಲು ಬರೆಯುವ ಮೂಲಕ ಅವನಿಂದ ಬಿಡುಗಡೆ ಹೊಂದುವ ಹಕ್ಕನ್ನು ಪಡೆದುಕೊಂಡಳು. ಹಿಂದೂ ದತ್ತಕ ಮತ್ತು ಜೀವನಾಂಶ ಕಾನೂನು ಸಮಗ್ರ ಮಹಿಳಾಲೋಕ ಬದುಕಿರುವವರೆಗೂ ಅಂಬೇಡ್ಕರ್ ರವರನ್ನು ನೆನಪಿಟ್ಟುಕೊಳ್ಳುವಂತೆ ಮಾಡಿದೆ.

2005 ರಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಮಹಿಳೆಯರಿಗೆ ಸಮಾನ ಹಕ್ಕು ಎಂಬ ಕಾನೂನು ಜಾರಿಗೆ ಬಂದಿತ್ತು. ಆದರೆ 1950 ರಲ್ಲಿ ಅಂಬೇಡ್ಕರ್ ರವರು ಹಿಂದೂ ಕೋಡ್ ಬಿಲ್ ಜಾರಿಗೆ ತಂದು ವಿಧವಾ ವಿವಾಹ, ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕು ಇದೆ ಎಂಬ ಪರಿಕಲ್ಪನೆಯನ್ನು ಮುಂದಿಟ್ಟಿದ್ದರು. ಮಹಿಳೆಯರ ಸಮಾನತೆ, ಸುರಕ್ಷತೆ, ಸ್ವಾವಲಂಬನೆ, ಶಿಕ್ಷಣ, ಶುಚಿತ್ವದ ಕುರಿತು ಸರ್ಕಾರ ಗಮನಕೊಡುತ್ತಿರುವುದಕ್ಕೆ ಸಂವಿಧಾನವೇ ಕಾರಣವಾಗಿದೆ. ಲಿಂಗ ಸಂವೇದನೆ ತುಂಬಾ ಮುಖ್ಯವಾಗಿದ್ದು, ಸಂವಿಧಾನದ 14, 15, 16, 39 ಮತ್ತು 42ನೇ ವಿಧಿಗಳು ಮಹಿಳೆಯರ ಹಕ್ಕುಗಳನ್ನು ಕುರಿತು ಸಮಗ್ರವಾಗಿ ಹೇಳುತ್ತವೆ. ಸಂವಿಧಾನದ 16ನೇ ವಿಧಿಯಲ್ಲಿ ಧರ್ಮ ಮತ್ತು ಜಾತಿಯ ಆಧಾರದಲ್ಲಿ ಯಾವುದೇ ತಾರತಮ್ಯ ಮಾಡುವಂತಿಲ್ಲ. ಮಹಿಳಾ ಸಬಲೀಕರಣಕ್ಕೆ ಪೂರಕ ಕಾನೂನು ಜಾರಿಗೆ ತರಲು ಸಂವಿಧಾನದಲ್ಲಿ ಅವಕಾಶವಿದೆ. ಜಗತ್ತಿನ ಬಹುತೇಕ ರಾಷ್ಟ್ರಗಳು ಮಹಿಳೆಯರಿಗೆ ಮತದಾನದ ಹಕ್ಕು ನೀಡಿಲ್ಲ; ಆದರೆ ಭಾರತದಲ್ಲಿ ಮಹಿಳೆಯರನ್ನು ಬೇರೆಯಾಗಿ ನೋಡದೆ ಮತದಾನದ ಹಕ್ಕನ್ನು ನೀಡಿದ್ದು ಬಹುದೊಡ್ಡ ಕಾಣಿಕೆಯಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಸರ್ಕಾರವು ಯಾವುದೇ ಪ್ರಜೆಯ ವಿರುದ್ಧ ಮತ, ಜಾತಿ, ಕುಲ, ಲಿಂಗ ಮತ್ತು ಹುಟ್ಟಿದ ಸ್ಥಳದ ಆಧಾರದ ಮೇಲೆ ತಾರತಮ್ಯ ಮಾಡತಕ್ಕದ್ದಲ್ಲವೆಂಬ ಅಂಶವನ್ನು ಅನುಚ್ಛೇದ 15 ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಸರ್ಕಾರದ ಯಾವುದೇ ಕಚೇರಿಯ ಉದ್ಯೋಗಾವಕಾಶದ ವಿಷಯದಲ್ಲಿ ಸರ್ವರಿಗೂ ಸಮಾನ ಅವಕಾಶವಿರಬೇಕು ಎಂಬುವುದನ್ನು ಅನುಚ್ಛೇದ 16 ನಿರ್ದೇಶಿಸುತ್ತದೆ. ಸ್ತ್ರೀ ಮತ್ತು ಪುರುಷರಿಗೆ ಸರಿಸಮಾನವಾದ ಜೀವನ ಅವಕಾಶಗಳನ್ನು ಒದಗಿಸತಕ್ಕದ್ದು ಮತ್ತು ಸ್ತ್ರೀ-ಪುರುಷರ ಸೇವೆಗೆ ಸಮಾನ ವೇತನವಿರಬೇಕು ಎಂಬುವುದರ ಕುರಿತು ಅನುಚ್ಛೇದ 39 ರಲ್ಲಿ ತಿಳಿಸಲಾಗಿದೆ. ಅನುಚ್ಛೇದ 112 ರ ಪ್ರಕಾರ ಮಹಿಳೆಯರ ಸೇವೆಗೆ ಅಗತ್ಯವಾದ ನ್ಯಾಯೋಚಿತ ಮತ್ತು ಮಾನವೀಯ ವಾತಾವರಣವನ್ನು ಕಲ್ಪಿಸಬೇಕಾದುದು ಮತ್ತು ಮಹಿಳೆಯರಿಗೆ ಪ್ರಸೂತಿ ಅಥವಾ ಹೆರಿಗೆ ಪರಿಹಾರಗಳನ್ನು ಒದಗಿಸಬೇಕಾದದ್ದು ಸರ್ಕಾರದ ಕರ್ತವ್ಯವಾಗಿದೆ ಎಂದು ಹೇಳಲಾಗುತ್ತದೆ. ಯಾವುದೇ ಸಮುದಾಯದ ಏಳಿಗೆಯನ್ನು ಅಳೆಯಬೇಕಾದರೆ ಅಲ್ಲಿಯ ಸ್ತ್ರೀಯರ ಪ್ರಗತಿಯನ್ನು ಗಮನಿಸಿದಾಗ ತಿಳಿಯುತ್ತದೆ ಎನ್ನುವ ಮಾನದಂಡ ಅಂಬೇಡ್ಕರ್ ರವರ ಮಹಿಳಾಪರ ಕಾಳಜಿಯನ್ನು ಬಿಂಬಿಸುತ್ತದೆ. ಆದ್ದರಿಂದ ಅಂಬೇಡ್ಕರ್ ರವರು ಸ್ತ್ರೀವಾದದ ಅಲೆಯನ್ನು ಹುಟ್ಟುಹಾಕಿದ ಮಹಿಳಾ ನಾಯಕರೆಂದರೆ ತಪ್ಪಾಗಲಾರದು.

ಯಾವುದೇ ದೇಶ ಅಭಿವೃದ್ಧಿ ಹೊಂದಿದೆ ಎಂದು ಪರಿಗಣಿಸಬೇಕಿದ್ದರೆ, ಆ ದೇಶದಲ್ಲಿ ಮಹಿಳೆಯರ ಸ್ಥಿತಿಗತಿ ನೋಡಬೇಕು ಎಂದು ಡಾ. ಬಿ. ಆರ್. ಅಂಬೇಡ್ಕರ್ ಹೇಳಿದರು. ಮಹಿಳೆಯರು ಘನತೆಯಿಂದ ಬದುಕಬೇಕು ಎಂಬ ದೂರದೃಷ್ಟಿಯಿಂದ ಸಂವಿಧಾನವನ್ನು

ರಚಿಸಿದರು. ಮಹಿಳೆಯರು ಸ್ವತಂತ್ರವಾಗಿ, ಸ್ವಾಭಿಮಾನಿಗಳಾಗಿ, ಗೌರವಯುತಳಾಗಿ ಬಾಳುವ ಎಲ್ಲಾ ಅವಕಾಶಗಳನ್ನು ತೆರೆದಿಟ್ಟ ಮಹನೀಯರು ಡಾ. ಬಿ. ಆರ್. ಅಂಬೇಡ್ಕರ್ ರವರು. ಇವರ ಪರಿಶ್ರಮದ ಫಲವಾಗಿ ಇಂದು ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಶಾಲೆಗಳ ಮೆಟ್ಟಿಲುಗಳನ್ನು ಏರುವ, ಉನ್ನತ ಹುದ್ದೆಗಳನ್ನು ಅಲಂಕರಿಸುವ ಹಾಗೂ ರಾಜಕೀಯ ಸ್ಥಾನಮಾನಗಳನ್ನು ಗಳಿಸುವಂತಾಗಿದೆ. ಸಂವಿಧಾನಾತ್ಮಕವಾಗಿರುವ ಶೈಕ್ಷಣಿಕ ಹಕ್ಕುಗಳು ಮತ್ತು ಪ್ರಸ್ತುತವಾಗಿ ಜಾರಿಗೆ ತಂದಿರುವ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪದ್ಧತಿಯು ಕೂಡಾ ಎಲ್ಲಾ ವರ್ಗದ ಮಹಿಳೆಯರ ಶೈಕ್ಷಣಿಕ ಸಬಲೀಕರಣಕ್ಕೆ ನಾಂದಿ ಹಾಡಿದೆ. ಡಾ. ಬಿ. ಆರ್. ಅಂಬೇಡ್ಕರ್ ಅವರು ಅಸಮಾನತೆಯನ್ನು ಹೋಗಲಾಡಿಸಿ ಐಕ್ಯತೆಯತ್ತ ಭಾರತ ಮುನ್ನಡೆಯಬೇಕೆಂಬ ಕನಸನ್ನು ಹೊಂದಿದವರು. ಪ್ರಜಾಪ್ರಭುತ್ವದ ಭವ್ಯ ತಳಹದಿಯ ಮೇಲೆ ಭಾರತದ ಭವಿಷ್ಯವನ್ನು ನಿರ್ಮಾಣ ಮಾಡಬಯಸಿದ್ದರು. ಸ್ವಾತಂತ್ರ್ಯ, ಸಮಾನತೆ, ಹೋರಾಟ, ಸ್ವಾಭಿಮಾನ ಮತ್ತು ಪ್ರತಿಭೆಗಳ ಮೇರು ಪರ್ವತ ಡಾ. ಬಿ. ಆರ್. ಅಂಬೇಡ್ಕರ್ ಎಂದರೆ ಅದೊಂದು ನಮ್ಮನ್ನು ನಾವೇ ಗೌರವಿಸಿಕೊಂಡ ಸಂಕೇತವಾಗಿರುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಡಾ. ಬಾಬಾಸಾಹೇಬ್ ಅಂಬೇಡ್ಕರ್ – ಅಂಬೇಡ್ಕರ್ ರವರ ಬರಹಗಳು ಮತ್ತು ಭಾಷಣಗಳು, ಸಂಪುಟ: 14, ಕುವೆಂಪು ಭಾಷಾ ಭಾರತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – 2012.
2. ಡಾ. ಎಚ್. ಎಸ್. ಅನುಪಮಾ – ಮಹಿಳೆ: ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ, ಲಡಾಯಿ ಪ್ರಕಾಶನ, ಗದಗ – 2012.
3. ಮೂಲ: ಡಾ. ಬಿ. ಆರ್. ಅಂಬೇಡ್ಕರ್, ಅನುವಾದ: ಮ. ನ. ಜವರಯ್ಯ – ಜಾತಿ, ಸತಿ ಮತ್ತು ಮಹಿಳೆ, ಸಿದ್ದಾರ್ಥ ಗ್ರಂಥಮಾಲೆ, ಮೈಸೂರು – 2000.
4. ಡಾ. ಬಾಬುರಾವ್ ಮುಡಬಿ – ಮಹಿಳಾ ಸಬಲೀಕರಣ: ಅಂಬೇಡ್ಕರ್ ದೃಷ್ಟಿಕೋನಗಳು, ಲಕ್ಷ್ಮೀ ಪ್ರಕಾಶನ, ಶಿವಮೊಗ್ಗ – 2005.
5. ಸಂಪಾದಕರು: ಡಾ. ಸದಾಶಿವ ಮರ್ಜಿ, ಡಾ. ಸುಭಾಷ್ ಚಂದ್ರ ನಾಟಿಕಾರ – ಅಸ್ಪೃಶ್ಯತೆ, ಶೂದ್ರರು ಮತ್ತು ಹಿಂದೂ ಮಹಿಳೆಯರು – ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 2023.
6. ಪ್ರಧಾನ ಸಂಪಾದಕರು: ಎಮ್. ಎಲ್. ರಾಯಮನೆ – ಡಾ. ಬಾಬಾಸಾಹೇಬ್ ಅಂಬೇಡ್ಕರ್ – ದಿವ್ಯಚಂದ್ರ ಪ್ರಕಾಶನ, ಬೆಂಗಳೂರು – 2010.
7. ಡಾ. ಟಿ. ಎಂ. ಭಾಸ್ಕರ್ – ಮಹಿಳೆ ಮತ್ತು ಅಂಬೇಡ್ಕರ್ – 2005.
8. ಅರವಿಂದ ಮಾಲಗತ್ತಿ – ಭೀಮ ನಡೆಯ ಬೆಳಕು – ದಾಮಿನಿ ಸಾಹಿತ್ಯ ಪ್ರಕಾಶನ – 2006.
9. ಡಾ. ಎಚ್. ಡಿ. ಪೋಡೆ: ನೀರ ನೆಳಲು – 2009.
10. ಮೂಲ: ವಸಂತ ಮೂನ್, ಅನುವಾದ: ಬಿ. ಎ. ಸನದಿ – ಡಾ. ಬಾಬಾಸಾಹೇಬ್ ಅಂಬೇಡ್ಕರ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸದೆಹಲಿ – 2002.